Reg. No. DWD/90/2015-2017 RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಧಾರವಾಡ<br>Dharwad | ಮಂಗಳವಾರ, ಜನವರಿ 19, 2016 (ಪುಷ್ಯ 29, ಶಕ ವರ್ಷ 1937)<br>Tuesday, January 19, 2016 (Pushaya 29, Shaka Varsha 1937) | ನಂ. 56<br>No. 56 |
|---|---|---|

ಭಾಗ–6ಬ



### ಭೂಸ್ವಾಧೀನ ಕಾಯ್ದೆಯ ಕಲಂ (17) ರೊಂದಿಗೆ ಓದಲಾದ ಪ್ರಕರಣ 6ರ ಅನ್ವಯ ಘೋಷಣೆ

ಸಂ: ಕಂ ಇ/ ಭೂಸ್ವಾ-2/ ನಿಭೂ- 240/15-16 ದಿನಾಂಕ: 14.01.16

ಭಾರತ ಸರ್ಕಾರವು "The Right to Fair Compensation and Transparency in Land Acquistion Rehabilitation & Resettlement Act-2013" ನ್ನು ದಿನಾಂಕ:01–01–2014ರಂದು ಜಾರಿಗೆ ಬಂದಿರುವದರಿಂದ ಈ ಹಿಂದಿನ ಭೂಸ್ವಾಧೀನ ಕಾಯ್ದೆ 1894 ನಿರಶನಗೊಂಡಿರುತ್ತದೆ. ಆದಾಗ್ಯೂ, ಈ ಹಿಂದೆ ಜಾರಿಯಲ್ಲಿದ್ದ ಭೂಸ್ವಾಧೀನ ಕಾಯ್ದೆ 1894 ರನ್ವಯ ಈಗಾಗಲೆ ಭೂಸ್ವಾಧೀನ ಪ್ರಕ್ರಿಯೆ ಕೈಕೊಂಡಿದ್ದು, ವಿವಿಧ ಹಂತಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳನ್ನು ಹಳೆಯ ಕಾಯ್ದೆಯ ಅನ್ವಯವೇ ಮುಂದುವರೆಸುವ ಅಥವಾ ಹೊಸ ಕಾಯ್ದೆಯನ್ನು ಅನ್ವಯಿಸುವ ಕುರಿತಂತೆ ಹೊಸ ಕಾಯ್ದೆ 2013ರ ಕಲಂ–24, 103 ಮತ್ತು 114 ಹಾಗೂ The General Clauses Act 1897 ರ ಸೆಕ್ಷನ್–6ರನ್ವಯ ಪರಿಶೀಲಿಸಿ ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮ ಸಂಖ್ಯೆ 17 ರಲ್ಲಿ ತಿದ್ದುಪಡಿ ಮಾಡಲಾದ 1894ನೇ ಭೂಸ್ವಾಧೀನ ಅಧಿನಿಯಮ (1894ನೇ ಕೇಂದ್ರ ಅಧಿನಿಯಮ) ಪ್ರಕಟಣೆ 6ರ ಅನ್ವಯ ಕೆಳಗಿನ ಅನುಸೂಚಿಯಲ್ಲಿ ನಿರ್ಧಿಷ್ಟ ಪಡಿಸಿದ ಜಮೀನು ಒಂದು ಉದ್ದೇಶಕ್ಕಾಗಿ ಅಂದರೆ **ತಿಮ್ಮಾಪೂರ ಏತ ನೀರಾವರಿಯ ಯೋಜನೆಯಲ್ಲಿನ ಕಿ.ಮೀ., 20.00 ರಿಂದ 53.06 ರ ಒಳಗಿನ ವಿತರಣಾ ತೊಟ್ಟಿ–1ರ ವಿತರಣಾ ಕಾಲುವೆ–22ರ ನಿರ್ಮಾಣಕ್ಕಾಗಿ** ಈ ಕುರಿತು ಬೇಕಾಗುವದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಸಿ) ಖಂಡದ ಮೇರೆಗೆ ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ನಂ:1, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟ ಇವರನ್ನು ಸದರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಯವರ ಪ್ರಕಾರ ಈ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯಮಿಸಲಾಗಿದೆ. ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ ಪ್ರಕರಣ 7 ರ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಅಧಿನಿಯಮ 6 ನೇ ಪ್ರಕರಣ ಉಪ ಪ್ರಕರಣ (1) ರಲ್ಲಿ ಪ್ರಕಟಿಸಲಾದ ಈ ನೋಟಿಸಿನ ಪ್ರಕಟಣೆ ನಂತರ 15 ದಿವಸಗಳಿಗೆ ಮುಂಚಿತವಾಗಿ ಭೂಮಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸದರೀ ಅಧಿನಿಯಮದ 17 ನೇ ಪ್ರಕರಣ (1) ಉಪ ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರ ನಿರ್ದೇಶಿಸಿದೆ.

ಸದರಿ ಜಮೀನಿನ ವಿವರವನ್ನು ಸೂಚಿಸುವ ಒಂದು ನಕಾಶೆಯನ್ನು ಆಸಕ್ತಿ ಜನರ ಅವಗಾಹಣೆಗಾಗಿ ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ನಂ:1, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟ ಇವರ ಕಛೇರಿಯಲ್ಲಿ ಇಡಲಾಗಿದೆ.

ಸಂ:ಎಲ್ಎಕ್ಯೂ:ಎಸ್ಆರ್: 126 /2013–14

## ಅನುಸೂಚಿ

ಜಿಲ್ಲಾ:ಬಾಗಲಕೋಟೆ ತಾಲ್ಲೂಕ:ಹುನಗುಂದ ಹೋಬಳಿ:ಅಮೀನಗಡ ಗ್ರಾಮ:ಬಸರಿಕಟ್ಟಿ

| ಅ. ನಂ | ಖಾತೆದಾರರ ಹಸರು / ಅನುಭವದಾರರ ಹೆಸರು | ಸರ್ವೆ ನಂಬರ | ಜಮೀನಿನ ತರಹೆ | ಸ ರ ಹ ದ್ದು | | | | ಬೇಕಾದ ಜಮೀನು | | ಇತರೆ ಆಸ್ತಿಗಳು |
|---|---|---|---|---|---|---|---|---|---|---|
| | | | | ಉತ್ತರ ಸ.ನಂ. | ದಕ್ಷಿಣ ಸ.ನಂ. | ಪೂರ್ವ ಸ.ನಂ. | ಪಶ್ಚಿಮ ಸ.ನಂ. | ಕ್ಷೇತ್ರ ಎ–ಗುಂ | ಆಕಾರ ರೂ.ಪೈ | ಕಟ್ಟಡ/ಗಿಡ /ಭಾವಿ |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | 1)ವಿಠ್ಠಲ 2)ಹುಲ್ಲಪ್ಪ 3)ಗೋಪಾಲ 4)ಪರಸಪ್ಪ ತಂ:ಚಂದಪ್ಪ ಹುಲ್ಲನ್ನವರ, ಪಿಕೆಪಿಎಸ್., ಬ್ಯಾಂ ನೀರಲಕೇರಿ ರೂ:99000–00 | 48/2 | ಖುಷ್ಕಿ | 35 | 49, ನಾಲಾ | 37, 47 | 68, 71, 73 ಕ.ಕಲ್ಲಾಪೂರ | 0–29 | 0–87 | – |
| | | | | | | | ಒಟ್ಟು | 0–29 | | |

Emor No - 56

(ಡಾ: ಬಿ ಶರಣಪ್ಪ)
ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿಗಳು,
ನಂ:1, ಕೃಷ್ಣಾ ಮೇಲ್ದಂಡೆ ಯೋಜನೆ,
ನವನಗರ, ಬಾಗಲಕೋಟೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಶಿವಯೋಗಿ ಸಿ. ಕಳಸದ)
ಆಯುಕ್ತರು.
ಪುನರವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ
ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು
ಕಂದಾಯ ಇಲಾಖೆ, ಕೃ.ಮೇ.ಯೋ. ಬಾಗಲಕೋಟ

ಉಪ ನಿರ್ದೇಶಕರು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ. ಇವರಿಂದ ಮುದ್ರಿಸಲ್ಪಟ್ಟಿತು.